**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ನಂಃ- 31-15**

(ಪ್ರಾ.ಸಾ. 11 ಚಾ.ಸಾ.-10)

ತಾಃ 06-06-2018 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು ಃ ಮಂಜುನಾಥ ಎಂ

ತಂದೆಯ ಹೆಸರು ಃ ನಾಗರಾಜಯ್ಯ
ವಯಸ್ಸು ಃ 40 ವರ್ಷ
ಉದ್ಯೋಗ ಃ ವ್ಯವಸಾಯ
ವಾಸ ಸ್ಥಳ ಃ ರಾಯರಪಾಳ್ಯ

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಸದರಿ ಪ್ರಕರಣದಲ್ಲಿ ನನಗೆ ಯಾವುದೇ ವಿಚಾರ ಗೊತ್ತಿಲ್ಲ. ನಾನು ಸದರಿ ಪ್ರಕರಣದಲ್ಲಿನ 1 ರಿಂದ 5 ಆರೋಪಿತರು ನನಗೆ ಗೊತ್ತಿಲ್ಲ. ಆರೋಪಿತರು ನನ್ನ ಸಮಕ್ಷಮ ಪೋಲೀಸರಿಗೆ ಯಾವುದೇ ಸ್ಥಳವನ್ನು ತೋರಿಸಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಈಗ ನನಗೆ ತೋರಿಸುತ್ತಿರುವ ನಿಪಿ 20 ನೋಡುತ್ತಿದ್ದೇನೆ. ನಿಪಿ 20 ರಲ್ಲಿ ನನ್ನ ಸಹಿ ಇಲ್ಲ. ನಿಪಿ 20 ರಲ್ಲಿ ಆಂಗ್ಲ ಭಾಷೆಯಲ್ಲಿ ಮಂಜುನಾಥ ಎಂದು ಬರೆದು ಮಾಡಿರುವ ಸಹಿ ನನ್ನದು ಅಲ್ಲ. ಪೋಲೀಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಪರಿಶೀಲಿಸಲಾಯಿತು. ಸಕಾರಣಗಳು ಇರುವುದರಿಂದ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**

ದಿನಾಂಕ 02-03-2014 ರಂದು ಪೋಲೀಸ್ ಠಾಣೆಗೆ ನನ್ನನ್ನು ಹಾಗೂ ಪ್ರಾಸಾ 10 ಮಂಜುನಾಥ ಬಿನ್ ಗಂಗಯ್ಯನನ್ನು ದಾಬಾಸ್‌ಪೇಟೆ ಹತ್ತಿರ ಕರೆಯಿಸಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ದೊಡ್ಡಬೆಳವಂಗಲ ಪೋಲೀಸರು ಈ ಪ್ರಕರಣದಲ್ಲಿನ 1 ರಿಂದ 5ನೇ ಆರೋಪಿತರನ್ನು ತೋರಿಸಿ ಈ ಪ್ರಕರಣದ ವಿದ್ಯಮಾನವನ್ನು ನಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿತರು ನಮ್ಮನ್ನು ಮತ್ತು ಪೋಲೀಸರನ್ನು ದಾಬಾಸ್‌ಪೇಟೆ ಬಸ್ ನಿಲ್ದಾಣದಲ್ಲಿ ತುಮಕೂರು ಕಡೆ ಇರುವ ಸರ್ವೀಸ್ ರಸ್ತೆ ಕಡೆ ಇರುವ ಸೋಮೇಶ್ವರ ಬೇಕರಿ ಮುಂಭಾಗ ರಸ್ತೆಯ ಬಳಿ ಕರೆದುಕೊಂಡು ಹೋಗಿದ್ದರು ಅಂತ ಮತ್ತು ಇದೇ ಸ್ಥಳದಲ್ಲಿ ಇದ್ದ ಇಬ್ಬರು ಸಮವಸ್ತ್ರದಲ್ಲಿದ್ದ ವ್ಯಕ್ತಿಗಳನ್ನು ನಮ್ಮ ವಾಹನದಲ್ಲಿ ಹತ್ತಿಸಿಕೊಂಡು ಹೋಗಿ ದರೋಡೆ ಮಾಡಿದ್ದು ಎಂದು ಹೇಳಿ ಸದರಿ ವ್ಯಕ್ತಿಗಳನ್ನು ಹತ್ತಿಸಿಕೊಂಡು ಹೋಗಿದ್ದ ಸ್ಥಳವನ್ನು ತೋರಿಸಿದ್ದರು ಎಂದರೆ ಸರಿಯಲ್ಲ. ಮುಂದೆ ಸದರಿ ಆರೋಪಿತರು ಹೆಚ್ ಡಿ ಎಫ್ ಸಿ ಬ್ಯಾಂಕ್ ಎ ಟಿ ಎಂ ಬಳಿ ಕರೆದುಕೊಂಡು ಹೋಗಿ ತಾವು ಹತ್ತಿಸಿಕೊಂಡು ಹೋಗಿದ್ದ ಇಬ್ಬರು ವ್ಯಕ್ತಿಗಳ ಪೈಕಿ ಒಬ್ಬನನ್ನು ಎ ಟಿ ಎಂ ಗೆ ಬಲವಂತವಾಗಿ ಕರೆದುಕೊಂಡು ಹೋಗಿ ಹಣ ಡ್ರಾ ಮಾಡಿಸಿಕೊಂಡ ಸ್ಥಳ ಎಂದು

ಹೆಚ್ ಡಿ ಎಫ್ ಸಿ ಬ್ಯಾಂಕಿನ ಎ ಟಿ ಎಂ ಅನ್ನು ತೋರಿಸಿದರು ಎಂದರೆ ಸರಿಯಲ್ಲ. ಈ ಕುರಿತು ಪೋಲೀಸರು ನಿಪಿ- 20 ರಲ್ಲಿ ಕಾಣಿಸಿದಂತೆ ಮಹಜರ್ ಮಾಡಿ ಅದಕ್ಕೆ ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ನಿಪಿ 20 ರಲ್ಲಿ ಆಂಗ್ಲ ಭಾಷೆಯಲ್ಲಿ ಮಂಜುನಾಥ ಎಂದು ಬರೆದು ಮಾಡಿದ ಸಹಿ ನನ್ನದೇ ಇದೆ ಎಂದರೆ ಸರಿಯಲ್ಲ.

ಈ ಕುರಿತು ನಾನು ಪೋಲೀಸರ ಮುಂದೆ ದಿನಾಂಕ 02-03-2014 ರಂದು ಈಗ ನನಗೆ ಓದಿ ಹೇಳಿದ “ ಈ ದಿನ ಬೆಳಗ್ಗೆ 10 ಗಂಟೆಗೆ ..... ಮತ್ತೊಮ್ಮೆ ನೋಡಿದರೆ ಗುರುತಿಸುತ್ತೇನೆ ” ಎಂದು ನಿಪಿ -27 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಈ ಪ್ರಕರಣದ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ ಃ**

ಏನೂ ಇಲ್ಲ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು